# ಕಲಾ ಅಭ್ಯಾಸ

ಕಲಾ ಅಭ್ಯಾಸ ಅನುದಾನ ಕಾರ್ಯಕ್ರಮವನ್ನು 2020ರಲ್ಲಿ ಜಸ್ಟಿನ್ ಮೆಕಾರ್ತಿ, ನೀಲಂ ಮಾನ್ ಸಿಂಗ್, ಗೀತಾಂಜಲಿ ರಾವ್ ಹಾಗೂ ಸಂಜಯ್ ಕಾಕ್ ಅವರನ್ನೊಳಗೊಂಡ ತಜ್ಞರ ಸಮಿತಿ ಪುನರ್ಪರಿಶೀಲನೆ ಮಾಡಿತು. ಈ ವಿಮರ್ಶಾ ಪ್ರಕ್ರಿಯೆಗೆ ಅನುವಾಗುವಂತೆ, ಕಲೆಗಳಿಗೆ ಬೇಕಾದ ನೆರವಿನ ಬಗೆಗೆ ಕಲಾ ಅಭ್ಯಾಸ ಹಾಗೂ ಕಲಾ ಪೋಷಣೆಯಲ್ಲಿ ತೊಡಗಿರುವವರಿಂದ ಅಭಿಪ್ರಾಯಗಳನ್ನು ತೆಗೆದುಕೊಂಡೆವು. (ಮಾಹಿತಿಗಾಗಿ ನಮ್ಮ 'ವಾಯ್ಸಸ್ ಫ್ರಮ್ ದಿ ಫೀಲ್ಡ್' – ದೃಶ್ಯ ಕಲೆ ಹಾಗೂ ಸಿನೆಮಾ – *Visual Arts and Films* ಹಾಗೂ ಪ್ರದರ್ಶನ ಕಲೆ ಹಾಗೂ ಸಾಹಿತ್ಯ – *Performance and Literature* ವರದಿಗಳನ್ನು ನೋಡಿ). ಈ ತಜ್ಞರ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ನಮ್ಮ ಕಲಾ ಅಭ್ಯಾಸ ಅನುದಾನ ಕಾರ್ಯಕ್ರಮವನ್ನು ಪುನರ್ರಚಿಸಲಾಗಿದೆ.

ಕಲಾವಿದರು ತಮ್ಮ ಪ್ರಸ್ತುತ ಅಭ್ಯಾಸವನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಲು ಸಹಕಾರಿಯಾದ ಯೋಜನೆಗಳನ್ನು ಕೈಗೊಳ್ಳುವುದು ಕಲಾ ಅಭ್ಯಾಸ ಕಾರ್ಯಕ್ರಮದ ಉದ್ದೇಶ. ಇವುಗಳು ಪ್ರಯೋಗಶೀಲವಾಗಿದ್ದು, ಈಗಾಗಲೇ ಒಪ್ಪಿತವಾದ ರೂಢಿಗಳನ್ನು ಪ್ರಶ್ನಿಸುವಂಥದ್ದಾಗಿರಬಹುದು, ತಮ್ಮ ಕಲಾ ಪ್ರಕಾರದಲ್ಲಿ ವಸ್ತು, ರೂಪ, ಮಾಧ್ಯಮಗಳ ಹೊಸ ಸಾಧ್ಯತೆಗಳನ್ನು ಹುಡುಕುವಂಥದ್ದಾಗಿರಬಹುದು, ರಂಗಸ್ಥಳ, ಶ್ರೋತೃಗಳು/ ವೀಕ್ಷಕರು, ಅಥವಾ ಸಮುದಾಯದ ಜೊತೆಗೆ ಹೊಸ ರೀತಿಯ ಪಾಲ್ಗೊಳ್ಳುವಿಕೆಯನ್ನು ಹುಡುಕುವಂಥದ್ದಾಗಿರಬಹುದು.

ಯೋಜನೆಗಳು ಹೊಸ ಕಲ್ಪನೆಯೊಂದನ್ನು ವಿಸ್ತರಿಸಬಹುದು, ಹೊಸ ಕಲಾಕೃತಿಯ ನಿರ್ಮಾಣ ಮಾಡಬಹುದು, ವಿಚಾರ ಸಂಕಿರಣ, ಕಾರ್ಯಾಗಾರ, ವಸತಿ ಶಿಬಿರಗಳ(ರೆಸಿಡೆನ್ಸಿಗಳು) ಮೂಲಕ ಕಲಾವಿದರನ್ನು ಒಂದುಗೂಡಿಸುವಂತಹ ವಿಚಾರ ವಿನಿಮಯ, ಸಂವಾದಗಳಿಗೆ ಅನುವು ಮಾಡಿಕೊಡುವ ವೇದಿಕೆಯನ್ನು ಕಲ್ಪಿಸಬಹುದು. ಈ ಅನುದಾನ ಕಾರ್ಯಕ್ರಮವು ಆಂಗ್ಲಭಾಷೆಯಲ್ಲದೆ ಇತರ ಭಾರತೀಯ ಭಾಷೆಗಳಲ್ಲಿ ಕೆಲಸ ಮಾಡುವುದನ್ನು ಹಾಗೂ ಒಂದೇ ಕಲಾಪ್ರಕಾರ ಅಥವಾ ವಿಭಿನ್ನ ಕಲಾಪ್ರಕಾರಗಳೊಂದಿಗೆ ಅಂತರ್ಶಿಸ್ತೀಯವಾಗಿ ಕೆಲಸ ಮಾಡುವುದನ್ನು ಪ್ರೋತ್ಸಾಹಿಸುತ್ತದೆ. ನಿಮ್ಮ ಯೋಜನಾ ಪ್ರಸ್ತಾವನೆಗಳನ್ನು ಐ ಎಫ್ ಎ ಯ ಸಿಬ್ಬಂದಿಯೊಡನೆ ಸಂವಾದದ ಮೂಲಕ ರೂಪುಗೊಳಿಸಬಹುದಾಗಿದೆ. ಕರಡು ಪ್ರಸ್ತಾವನೆಗಳನ್ನು ಬರವಣಿಗೆ ಹಾಗೂ ಶ್ರಾವ್ಯ/ದೃಶ್ಯ (ಆಡಿಯೋ/ ವೀಡಿಯೊ) ರೂಪದಲ್ಲಿ ಕಳುಹಿಸಬಹುದಾಗಿದೆ.

ಈ ಕಾರ್ಯಕ್ರಮವನ್ನು ಕೆಳಕಂಡ ವಿಭಾಗಗಳ ಅಡಿಯಲ್ಲಿ ಕೈಗೊಳ್ಳಲಾಗುತ್ತದೆ:

**1. ಅನ್ವೇಷಣೆ/ ಹುಡುಕಾಟ:**

ಹಿಂದೆಂದೂ ಕಂಡುಬರದ, ಹೊಸ ಕಲ್ಪನೆಯನ್ನು ಪರೀಕ್ಷಿಸುವ, ಅದರ ಸಾಧ್ಯತೆಗಳನ್ನು ಪರಿಶೀಲಿಸುವ ಪ್ರಯತ್ನಗಳು - ಇದರ ಪರಿಣಾಮವಾಗಿ ಕಲಾಕೃತಿಯೊಂದು ಹುಟ್ಟಬಹುದು, ಹುಟ್ಟದೆಯೂ ಇರಬಹುದು. ಈ ನಿಟ್ಟಿನಲ್ಲಿ ಸಂಶೋಧನೆ, ಸ್ಕ್ರಿಪ್ಟ್ ಬರಹ, ಜಾಮಿಂಗ್ - ಸಂಗೀತ ಸಹಯೋಗ, ಚಿತ್ರ ಕಥೆಯ ನಿರ್ಮಾಣ, ರಂಗತಾಲೀಮು ಹೀಗೆ ಒಂದು ಕಲ್ಪನೆಯ ಸಾಧ್ಯತೆಗಳನ್ನು ಅನ್ವೇಷಿಸುವ ಕೆಲಸಗಳಿರಬಹುದು.

ಅನುದಾನ ಮಿತಿ: ರೂ 75,000 ವರೆಗೆ.

ಸಮಯಸೂಚಿ: ಪ್ರಸ್ತಾವನೆಗಳನ್ನು ವರ್ಷಕ್ಕೊಮ್ಮೆ ಮುಕ್ತ ಆರ್ ಎಫ್ ಪಿ (ರಿಕ್ವೆಸ್ಟ್ ಫಾರ್ ಪ್ರೋಪೋಸಲ್ಸ್ ) - ಮೂಲಕ ಆಹ್ವಾನಿಸಲಾಗುವುದು.

ವಿವರಗಳಿಗಾಗಿ ಈ ಲಿಂಕ್ ನೋಡಿ

**2. ಕಲಾ ನಿರ್ಮಾಣಗಳು:**

ಪ್ರದರ್ಶನಾತ್ಮಕ, ಶ್ರಾವ್ಯ, ದೃಶ್ಯ, ಡಿಜಿಟಲ್, ಸಾಹಿತ್ಯಿಕ ಅಥವಾ ಈ ಪ್ರಕಾರಗಳನ್ನು ಒಳಗೊಂಡ ಅಂತರ್ಶಿಸ್ತೀಯ ಕಲಾ ನಿರ್ಮಾಣಗಳಿಗೆ. ಇವು ನಾಟಕ, ನೃತ್ಯ, ಸಂಗೀತ ಪ್ರದರ್ಶನಗಳು, ಇನ್ಸ್ಟಲೇಶನ್ಸ್, ಪ್ರದರ್ಶನಗಳು, ಪುಸ್ತಕಗಳು, ಮ್ಯಾಗಜಿನ್ ಮತ್ತಿತರ ಪ್ರಕಟಣೆಗಳು, ಸಿನೆಮಾ ಹಾಗೂ ಚಲನ ಚಿತ್ರ ಪ್ರಸ್ತುತಿಗಳು, ಆಟಗಳು (ಗೇಮ್ಸ್), ಇಂಟರ್ಫೇಸ್ ಹಾಗೂ ಇನ್ನಿತರ ಡಿಜಿಟಲ್ ಕಲಾಕೃತಿಗಳು ಅಥವಾ ಇನ್ನಾವುದೇ ಇಲ್ಲಿಯವರೆಗೆ ಕಲ್ಪಿಸದ ಪ್ರಕಾರಗಳನ್ನು ಒಳಗೊಂಡಿರಬಹುದು.

ಅನುದಾನ ಮಿತಿ : ರೂ 5,00,000/-

ಸಮಯಸೂಚಿ: ಪ್ರಸ್ತಾವನೆಗಳನ್ನು ವರ್ಷಕ್ಕೊಮ್ಮೆ ಮುಕ್ತ ಆರ್ ಎಫ್ ಪಿ (ರಿಕ್ವೆಸ್ಟ್ ಫಾರ್ ಪ್ರೋಪೋಸಲ್ಸ್ ) - ಮೂಲಕ ಆಹ್ವಾನಿಸಲಾಗುವುದು.

ವಿವರಗಳಿಗಾಗಿ ಈ ಲಿಂಕ್ ನೋಡಿ

**3. ಕಾರ್ಯಾಗಾರಗಳು, ವಸತಿ ಶಿಬಿರಗಳು, ಸಂಕಿರಣಗಳು:**

ವಿಚಾರ ವಿನಿಮಯ, ಚರ್ಚೆ, ಸಂವಾದ, ಕಲಿಕೆ ಹಾಗೂ ಮಾರ್ಗದರ್ಶನಕ್ಕೆ ಅನುವು ಮಾಡಿಕೊಡುವ ಸಂದರ್ಭ ಹಾಗೂ ವಾತಾವರಣವನ್ನು ಸೃಷ್ಟಿಸುವುದಕ್ಕಾಗಿ. ಇವು ಕಲಾವಿದರನ್ನು ಪೋಷಿಸುವ, ಕಲಾ ಸಹಯೋಗಗಳನ್ನು ಪ್ರೋತ್ಸಾಹಿಸುವ, ಅಥವಾ ಪ್ರಯೋಗಗಳಿಗೆ ಅನುವು ಮಾಡಿಕೊಡುವ ವಸತಿ ಶಿಬಿರಗಳಿರಬಹುದು, ಕಾರ್ಯಾಗಾರಗಳು, ಸಂಕಿರಣಗಳು ಅಥವಾ ಜ್ಞಾನವನ್ನು ವೃದ್ಧಿಸುವ, ಒಳನೋಟಗಳನ್ನು ಹುಟ್ಟುಹಾಕುವ

ಹಾಗೂ ಕಲಾ ಅಭ್ಯಾಸದ ಪರಿಧಿಗಳನ್ನು ವಿಸ್ತರಿಸುವ ಇನ್ನಾವುದೇ ಒಟ್ಟು ಸೇರುವಿಕೆ ಇರಬಹುದು.

ಅನುದಾನ ಮಿತಿ: ರೂ 3,00,000/-

ಸಮಯಸೂಚಿ: ಪ್ರಸ್ತಾವನೆಗಳನ್ನು ವರ್ಷದಾದ್ಯಂತ ಸ್ವೀಕರಿಸಲಾಗುವುದು.

ವಿವರಗಳಿಗಾಗಿ ಈ ಲಿಂಕ್ ನೋಡಿ

**4. ಕಲಾ ವೇದಿಕೆಗಳು:**

ನಿರ್ದಿಷ್ಟ ಕಲಾಪ್ರಕಾರಗಳ ಒಳಗೆ ಅಥವಾ ಎರಡು/ ಹೆಚ್ಚಿನ ಪ್ರಕಾರಗಳ ನಡುವೆ ಕಲಾವಿದರನ್ನು ಒಂದುಗೂಡಿಸುವ, ಸೃಜನಶೀಲತೆಯನ್ನು ಪೋಷಿಸುವ, ಹಾಗೂ ತಮ್ಮ ಕಲಾಭ್ಯಾಸವನ್ನು ಮುಂದುವರೆಸಲು ಸಹಾಯಮಾಡುವ ಉದ್ದೇಶದಿಂದ ಕೂಡಿದ ಸಂಪರ್ಕ ಜಾಲಗಳು ಹಾಗೂ ವೇದಿಕೆಗಳ ನಿರ್ಮಾಣ (ಭೌತಿಕ ಅಥವಾ ಬೇರೆ ರೀತಿಯ ವೇದಿಕೆಗಳಾಗಿರಬಹುದು).

ಅನುದಾನ ಮಿತಿ: ರೂ 1,50,000/-

ಸಮಯಸೂಚಿ: ಪ್ರಸ್ತಾವನೆಗಳನ್ನು ವರ್ಷದಾದ್ಯಂತ ಸ್ವೀಕರಿಸಲಾಗುವುದು.

ವಿವರಗಳಿಗಾಗಿ ಈ ಲಿಂಕ್ ನೋಡಿ

(ಐ ಎಫ್ ಎ ಇಂದ ಈ ಹಿಂದೆ ಅನುದಾನ ಪಡೆದ ಕಲಾ ಯೋಜನೆಗಳ ಪ್ರಸಾರಕ್ಕೂ ಈ ಕಾರ್ಯಕ್ರಮದಡಿಯಲ್ಲಿ ಧನಸಹಾಯ ಲಭ್ಯವಿರಬಹುದು. ಈ ರೀತಿಯ ಯೋಜನೆಗಳನ್ನು ನಮ್ಮ ಕಾರ್ಯಕ್ರಮ ಅಧಿಕಾರಿಗಳ ಜೊತೆ ಚರ್ಚಿಸಿ ರೂಪಿಸಬಹುದಾಗಿದೆ. ಅನುದಾನ ಮಿತಿ ಪ್ರತಿ ಯೋಜನೆಯ ರೂಪುರೇಷೆಗಳ ಮೇಲೆ ಅವಲಂಬಿವಾಗುತ್ತದೆ.)

**ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?**

ಈ ಕಾರ್ಯಕ್ರಮದಡಿಯಲ್ಲಿ ನಿರ್ದಿಷ್ಟ ಕಲಾಪ್ರಕಾರವೊಂದರಲ್ಲಿ ಅಥವಾ ಅಂತರ್ಶಿಸ್ತೀಯವಾಗಿ ಕೆಲಸ ಮಾಡುತ್ತಿರುವ ಕಲಾವಿದರು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

- ಸಂಗೀತ, ಶಬ್ದ, ಪಠ್ಯ, ನೃತ್ಯ, ಚಲನೆ, ನಾಟಕ, ಗೊಂಬೆಯಾಟ, ಕಥೆ ಹೇಳುವುದು, ಇಂದ್ರಜಾಲ, ಸರ್ಕಸ್ ಹಾಗೂ ಇನ್ನಿತರ ಪ್ರದರ್ಶನ ಕಲೆಗಳಲ್ಲಿ ತೊಡಗಿಕೊಂಡ ಕಲಾವಿದರಿರಬಹುದು.
- ಸಿನಿಮಾ (ಸಾಕ್ಷ್ಯಚಿತ್ರ ಹಾಗೂ ಕಲ್ಪನೆಯ ಆಧಾರಿತ), ಅನಿಮೇಶನ್, ಛಾಯಾಚಿತ್ರ, ಇನ್ಸ್ಟಲೇಶನ್, ಹೊಸ ಮೀಡಿಯಾ, ಕೃತಕ ಬುದ್ಧಿವಂತಿಕೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ರೊಬೊಟಿಕ್ಸ್, ಸಂವಹನಾತ್ಮಕ ಕಲೆಗಳು, ಗೇಮಿಂಗ್, ಚಿತ್ರಕಲೆ,

ಶಿಲ್ಪಕಲೆ, ಪ್ರಿಂಟ್ ತಯಾರಿಕೆ, ಕಾಮಿಕ್ ಪುಸ್ತಕ, ಗ್ರಾಫಿಕ್ ಕಥನ ಇನ್ನಿತರ ಕಲೆಗಳಲ್ಲಿ ತೊಡಗಿಕೊಂಡಿರುವ ದೃಶ್ಯ ಕಲಾವಿದರಿರಬಹುದು.

- ಕಲಾ ನಿರ್ವಾಹಕರು (ಕ್ಯುರೇಟರ್ಸ್) – ಅದರಲ್ಲೂ ಗ್ಯಾಲರಿಗಳ ಹೊರತಾಗಿ ಕೆಲಸ ಮಾಡುತ್ತಿರುವವರು.
- ಕವಿಗಳು, ಕಾದಂಬರಿಕಾರರು, ನಾಟಕಕಾರರು
- ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿಕೊಂಡಿರುವವರು

**ಅರ್ಹತೆ:**

ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ಯೋಜನಾ ಪ್ರಸ್ತಾವನೆಯನ್ನು ಕಳುಹಿಸಲು ನೀವು ಅರ್ಹರು. ಯೋಜನೆಯಡಿಯಲ್ಲಿ ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಕೂಡ ಭಾರತೀಯ ನಾಗರಿಕರಾಗಿರುವುದು ಅವಶ್ಯಕ. ವಿವರಗಳಿಗಾಗಿ ಈ ಲಿಂಕ್ ನೋಡಿ

ಯಾವುದೇ ಪ್ರಶ್ನೆ/ಸಂದೇಹಗಳಿದ್ದಲ್ಲಿ, ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಸುಮನಾ ಚಂದ್ರಶೇಖರ್ ಅವರನ್ನು sumana@indiaifa.org ಅಥವಾ ಜಾನ್ ಜೇವಿಯರ್ಸ್ ಅವರಿಗೆ john@indiaifa.org ಮಿಂಚಂಚೆಯ ಮೂಲಕ ಸಂಪರ್ಕಿಸಿ.

ಅಥವಾ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಿರಿ:

**ಕಾರ್ಯಕ್ರಮ ಅಧಿಕಾರಿ, ಕಲಾ ಅಭ್ಯಾಸ**
**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್**
**'ಅಪೂರ್ವ', ನೆಲಮಹಡಿ, ನಂಬರ್ 259**
**4ನೇ ಅಡ್ಡರಸ್ತೆ, ರಾಜಮಹಲ್ ವಿಲಾಸ್ 2ನೆಯ ಹಂತ, 2ನೆಯ ಬ್ಲಾಕ್**
**ಬೆಂಗಳೂರು - 560094**
**ದೂರವಾಣಿ: 080 - 2361 4681 / 82**